**ಪ್ರಮಾಣ ವಚನ ಬೋಧಿಸಿದ ದಿನಾಂಕಃ 04.12.2024**

**ಪಾಟೀ-ಸವಾಲುಃ ಶ್ರೀ ವಿ.ಎಮ್.ಎನ್ Chief Legal Aid Defense ವಕೀಲರಿಂದ ಆರೋಪಿಯ ಪರವಾಗಿಃ**

ನಾನೇನು ವಿದ್ಯಾಭ್ಯಾಸ ಮಾಡಿಲ್ಲ. ದೂರಿನಲ್ಲಿ ಏನು ಬರೆದಿದೆ ಎಂದು ತಿಳಿದಿದೆಯೇ ಎಂದರೆ ಸಾಕ್ಷಿ ನನ್ನ ಜೊತೆ ಬಂದಿದ್ದ ಅಕ್ಕಪಕ್ಕದವರು ದೂರನ್ನು ನೀಡಿರುತ್ತಾರೆ. ಅಕ್ಕಪಕ್ಕದವರ ಹೆಸರು ಜಗನ್ನಾಥ ಎಂಬುದಾಗಿದೆ. ದೂರಿನಲ್ಲಿ ಏನು ಬರೆದಿದೆ ಎಂದು ನನಗೇನು ಪೊಲೀಸರು ಓದಿ ಹೇಳಿರುವುದಿಲ್ಲ. ಪೊಲೀಸರು ಬರೆದಿರುವುದಕ್ಕೆ ಸಹಿ ಮಾಡಿರುತ್ತೀರಾ ಎಂದರೆ ಹೌದು. ಪೊಲೀಸರಿಗೆ ಘಟನೆ ನಡೆದ ಮರುದಿನ ದೂರನ್ನು ನೀಡಲಾಗಿರುತ್ತದೆ ಎಂದರೆ ಹೌದು. ಘಟನಾ ದಿನಾಂಕದಂದೆ ದೂರು ಕೊಡಲು ಏನು ತೊಂದರೆ ಇತ್ತು ಎಂದರೆ ಸಾಕ್ಷಿ ನನಗೆ ದೂರು ಕೊಡಬೇಕೆಂದೆ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ.

ನಿಮ್ಮ ಮುಖ್ಯ ವಿಚಾರಣೆಯಲ್ಲಿ ಘಟನಾ ಸಮಯದಲ್ಲಿ ಆಟೋ ಚಾಲನೆ ಮಾಡುತ್ತಿದ್ದಾಗಿ ಹೇಳಿದ್ದು ಅದು ಯಾರ ಆಟೋ ರಿಕ್ಷಾ ಎಂದರೆ ಸಾಕ್ಷಿ ಅದು ಓನರ್ ರವರ ಆಟೋ ರಿಕ್ಷಾ ಎನ್ನುತ್ತಾರೆ. ನನಗೆ ಓನರ್ ಹೆಸರು ಹಾಗೂ ಆಟೋ ರಿಕ್ಷಾ ನಂಬರ್ ಹೇಳಲು ಆಗುವುದಿಲ್ಲ. ನನ್ನ ಪತ್ನಿ ಶಾಹೀನ್ ತಾಜ್ ಒಂದು ಚಿಲ್ಲರೆ ಅಂಗಡಿ ಇಟ್ಟುಕೊಂಡಿದ್ದರು ಎಂದರೆ ಹೌದು. ನನ್ನ ಪತ್ನಿ ಜೊತೆ ಅಕ್ರಮ ಸಂಬಂಧ ಹೊಂದಿದ್ದ ವ್ಯಕ್ತಿಗಳು ಚಿಲ್ಲರೆ ಅಂಗಡಿ ವ್ಯಾಪಾರದ ನೆಪದಲ್ಲಿ ಮನೆಗೆ ಬರುತ್ತಿದ್ದರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಹೆಂಡತಿ ಶಾಹೀನ್ ತಾಜ್ ಅಕ್ರಮ ಸಂಬಂಧ ಹೊಂದಿದ್ದ ಕಾರಣ ನಾನು ಅವಳಿಗೆ ಬುದ್ದಿವಾದ ಹೇಳಿದ್ದೆ ಎಂದರೆ ಸುಳ್ಳು. ಅವಳು ಆ ರೀತಿ ಇರಲಿಲ್ಲ. ನನ್ನ ಮತ್ತು ನನ್ನ ಪತ್ನಿಯ ನಡುವೆ ಆಕೆ ಅಕ್ರಮ ಸಂಬಂಧ ಇಟ್ಟುಕೊಂಡ ವಿಚಾರವಾಗಿ ಹಲವಾರು

ಬಾರಿ ಗಲಾಟೆಗಳಾಗಿವೆ ಎಂದರೆ ಸರಿಯಲ್ಲ. ನಾನು ಎರಡು ವರ್ಷಗಳ ಹಿಂದೆ ಕೆ.ಆರ್ ಮಾರ್ಕೇಟ್ ಗೆ ಹೋಗಿದ್ದೆ. ನಾನು ಮಾರ್ಕೇಟ್ ಗೆ ಕೆಲಸಕ್ಕೆ ಬೆಳಿಗ್ಗೆ ಹೋಗಿ ಸಂಜೆ ಬರುತ್ತಿದ್ದೆ.

ನನ್ನ ಹೆಂಡತಿ ತೀರಿಕೊಂಡ ವಿಷಯವನ್ನು ಯಾವ ದಿನಾಂಕದಂದು ಅಕ್ಕಪಕ್ಕದವರಿಗೆ ತಿಳಿಸಿದೆ ಎಂದು ನನಗೆ ನೆನಪಿಲ್ಲ. ಪೊಲೀಸನವರಿಗೆ ಕರೆ ಮಾಡಿದ ದೂರವಾಣಿ ನಂಬರ್ ನನಗೆ ಜ್ಞಾಪಕ ಇಲ್ಲ. ಎರಡು ಮೂರು ದಿನಗಳ ನಂತರ ಠಾಣೆಗೆ ಕರೆಸಿದ ದಿನಾಂಕ ನನಗೆ ನೆನಪಿಲ್ಲ. ಪೊಲೀಸರಿಗೆ ದೂರು ಕೊಟ್ಟ ಮರುದಿನ ಅವರು ಮಹಜರ್ ಮಾಡಲು ಬಂದಿದ್ದರು. ಪೊಲೀಸರವರಿಗೆ ನಾನು ಮರುಹೇಳಿಕೆ ಕೊಟ್ಟಿದ್ದೆನೋ ಇಲ್ಲವೋ ಗೊತ್ತಿಲ್ಲ. ದೂರಿನಲ್ಲಿ ಯಾವುದೇ ವ್ಯಕ್ತಿಗಳ ಹೆಸರನ್ನು ನಮೂದಿಸಿಲ್ಲ ಎಂದರೆ ಸರಿ. ನನ್ನ ಪತ್ನಿಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದ ಬೇರೆ ವ್ಯಕ್ತಿಗಳು ಆ ದಿನ ಮನೆಗೆ ಬಂದು ನನ್ನ ಪತ್ನಿಯೊಂದಿಗೆ ಜಗಳ ಮಾಡಿದ್ದರು ಎಂದರೆ ಸರಿಯಲ್ಲ. ನಾನು ಮನೆಯಲ್ಲಿ ಇರಲಿಲ್ಲ. ಘಟನೆ ಹೇಗೆ ನಡೆಯಿತು ಎಂದು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ.

ಈಗ ನಾನು ವಿಸಿ ಮುಖಾಂತರ ನೋಡುತ್ತಿರುವ ಜೆ.ಸಿ.ಯಲ್ಲಿರುವ ಆರೋಪಿ ಅಕ್ರಮ ಖಾನ್ ನನ್ನ ಪಕ್ಕದ ಮನೆಯ ವಾಸಿ ಎಂದರೆ ಹೌದು. ಆರೋಪಿಯೊಂದಿಗೆ ನನ್ನ ಪತ್ನಿ ಹಾಗೂ ನಾನು ಸಣ್ಣಪುಟ್ಟ ವಿಷಯಕ್ಕೆಲ್ಲ ಜಗಳವಾಡುತ್ತಿದ್ದೆವು ಎಂದರೆ ಸುಳ್ಳು. ನನ್ನ ಪತ್ನಿಗೆ ಆರೋಪಿತನ ತಾಯಿಯೊಂದಿಗೆ ದ್ವೇಷ ಇತ್ತು ಎಂದರೆ ಸುಳ್ಳು. ಅದೇ ವಿಷಯವಾಗಿ ಆರೋಪಿ ನನ್ನ ಮತ್ತು ನನ್ನ ಪತ್ನಿಗೆ ಜಗಳ, ದ್ವೇಷ ಬೇಡ ಎಂದು ತಿಳುವಳಿಕೆ ಹೇಳಿದ್ದ ಎಂದರೆ ಸರಿಯಲ್ಲ. ಆರೋಪಿ ಮತ್ತು ಆತನ ತಾಯಿಯ ಮೇಲೆ ದ್ವೇಷವಿದ್ದ ಕಾರಣ ನಾವು ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಪೊಲಿಸರು ಮಹಜರ್ ಗೆ ಬಂದಿಲ್ಲ ಎಂದರೆ ಸರಿಯಲ್ಲ. ಮಹಜರ್ ಗೆ ಬಂದಿದ್ದರು. ನಾನು ಮತ್ತು ನನ್ನ ಪಕ್ಕದ ಮನೆಯವರು ಇದ್ದರು. ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

ನಾನು ಪೊಲೀಸ್ ಠಾಣೆಯಲ್ಲಿ ಹಾಗೂ ಮನೆಯಲ್ಲಿ ಸಹಿ ಮಾಡಿರುತ್ತೇನೆ. ನನ್ನ ಪತ್ನಿ ಬೇರೆಯವರೊಂದಿಗೆ ಅಕ್ರಮ ಸಂಬಂಧ ಹೊಂದಿದ್ದು, ಆ ವ್ಯಕ್ತಿಗಳು ನನ್ನ ಪತ್ನಿಯ ಕತ್ತು ಸೀಳಿ ಕೊಲೆ ಮಾಡಿದ್ದು, ನಾನು ಪಕ್ಕದ ಮನೆಯವನಾದ ಅಕ್ರಮ್ ಖಾನ್ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ಸಂದರ್ಭದಲ್ಲಿ ಪೊಲೀಸರು ಯಾವುದೇ ವಸ್ತುಗಳನ್ನು ತೆಗೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಈಗ ತೋರಿಸಿದ ಮುದ್ದೆಮಾಲು-1 ರಿಂದ 9 ವಸ್ತುಗಳು ನನ್ನ ಪತ್ನಿಗೆ ಸಂಬಂಧಿಸಿದ್ದಲ್ಲ, ಆ ರೀತಿಯ ವಸ್ತುಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿಯಲ್ಲ.

ನಾನು ಘಟನಾ ದಿನಾಂಕದಂದು ಮನೆಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮನೆಗೆ ಹೋಗಿಲ್ಲ, ಮನೆಯಲ್ಲಿ ನನ್ನ ಪತ್ನಿಯ ಶವವನ್ನು ನೋಡಿಲ್ಲ, ಮನೆಯ ಬಾಗಿಲು ತೆರೆದಿರಲಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಪತ್ನಿಯ ಶವವನ್ನು ನೋಡಿಲ್ಲ, ಆಕೆಯ ದೇಹವನ್ನು ಪರೀಕ್ಷಿಸಿ ಮೃತಪಟ್ಟಿರುತ್ತಾಳೆ ಎಂದು ನಾನು ತಿಳಿದುಕೊಂಡಿರುವುದಿಲ್ಲ ಆದಾಗ್ಯೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನಗೆ ಪತ್ನಿಯ ಆಭರಣಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಪತ್ನಿಯ ಶವವನ್ನು ನೋಡಲು ಆಸ್ಪತ್ರೆಗೂ ಸಹ ಹೋಗಿರಲಿಲ್ಲ, ನನ್ನ ಪತ್ನಿಯ ಶವವನ್ನು ಗುರುತಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮನೆಯಲ್ಲೂ ಸಹ ನನ್ನ ಪತ್ನಿಯ ಶವವನ್ನು ನೋಡಿಲ್ಲ, ಆಸ್ಪತ್ರೆಯಲ್ಲೂ ಸಹ ನನ್ನ ಪತ್ನಿಯ ಶವವನ್ನು ನೋಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಆರೋಪಿಯನ್ನು ನನಗೆ ಈ ಮೊದಲು ತೋರಿಸಿರುವುದಿಲ್ಲ, ಅವನನ್ನು ವಾಹನದಲ್ಲಿ ಕರೆದುಕೊಂಡು ನಮ್ಮ ಮನೆಯ ಬಳಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನಮ್ಮ ಮನೆಯಿಂದ ಬೆಡ್, ದಿಂಬು, ಹಾಸಿಗೆ ಚಾಕು ಯಾವುದೇ ವಸ್ತುಗಳನ್ನು ತೆಗೆದುಕೊಂಡು ಹೋಗಿಲ್ಲ, ಅವುಗಳನ್ನು ಸೃಷ್ಟಿ

ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಆರೋಪಿಯನ್ನು ಇದೇ ಮೊದಲ ಬಾರಿಗೆ ನಾನು ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪತ್ನಿಯನ್ನು ಯಾವ ಉದ್ದೇಶಕ್ಕಾಗಿ ಸಾಯಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಶವ ಪಂಚನಾಮೆ ಸಂದರ್ಭದಲ್ಲಿ ಹಾಗೂ ಮಹಜರ್ ಸಂದರ್ಭದಲ್ಲಿ ಯಾವುದೇ ಭಾವಚಿತ್ರಗಳನ್ನು ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಶವ ತನಿಖಾ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಾಖಲೆಗಳಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಈ ಘಟನೆಗೂ ಮೊದಲು ನಮ್ಮ ಮನೆಯ ಬಳಿ ಬಂದು ನನ್ನ ಹಾಗೂ ನನ್ನ ಪತ್ನಿಯ ಜೊತೆಯಲ್ಲಿ ಗಲಾಟೆ ಮಾಡಿರುವುದಿಲ್ಲ. ನನ್ನ ಪತ್ನಿ ಮರಣ ಹೊಂದಿದ ಸಂದರ್ಭದಲ್ಲಿ ನಾನು ಆತನಿಗೆ ವೈದ್ಯರನ್ನು ನೋಡಲು ಸಹಾಯ ಮಾಡಲು ಕೇಳಿರುತ್ತೇನೆ. ಅವನು ವೈದ್ಯರನ್ನು ತೋರಿಸಿರುತ್ತಾನೆ. ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯ ವಿರದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ದೇವಾನಂದ)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.